# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ನಡವಳಿಗಳು

ಮುಖ್ಯ ಆಯುಕ್ತರವರ ಕಛೇರಿ, ಬಿ.ಬಿ.ಎಂ.ಪಿ ಕೇಂದ್ರ ಕಛೇರಿ ಆವರಣ, ಎನ್.ಆರ್. ವೃತ್ತ, ಬೆಂಗಳೂರು-5600 02

ವಿಷಯ: ಶ್ರೀಮತಿ ಪಿ. ಶಾನು, ಪ್ರಭಾರ ಕಾರ್ಯಪಾಲಕ ಅಭಿಯಂತರರು ಇವರ ಮನವಿಯನ್ನು ಪರಿಗಣಿಸದೆ ನಗರಾಭಿವೃದ್ಧಿ ಇಲಾಖೆಗೆ ಹಿಂದಿರುಗಿಸುವ ಬಗ್ಗೆ.

ಉಲ್ಲೇಖ:
1) ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಅಧಿಸೂಚನೆ ಸಂಖ್ಯೆ: ನಅಇ 201 ಎಂ.ಎನ್.ಯು 2020, ದಿನಾಂಕ: 12-03-2020
2) ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಅಧಿಸೂಚನೆ ಸಂಖ್ಯೆ: ಕವಿಪ್ರನಿನಿ/ಬಿ100/13538/2020-21/04, ದಿನಾಂಕ: 14-06-2021
3) ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಅಧಿಸೂಚನೆ ಸಂಖ್ಯೆ: ನಅಇ 233 ಎಂ.ಎನ್.ಯು 2021, ದಿನಾಂಕ: 06-07-2021
4) ಸಂಖ್ಯೆ: ಬಿ12(6)ಪಿಆರ್/35/21-22, ದಿನಾಂಕ: 08-07-2021
5) ಸಂಖ್ಯೆ: ಬಿ12(6)ಪಿಆರ್/E-35869/23-24, ದಿನಾಂಕ: 03-10-2023
6) ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಅಧಿಸೂಚನೆ ಸಂಖ್ಯೆ: ನಅಇ 338 ಎಂ.ಎನ್.ಯು 2023, ದಿನಾಂಕ: 04-10-2023
7) ಶ್ರೀಮತಿ ಶಾನು, ಪ್ರಭಾರ ಕಾ.ಪಾ.ಅ ರವರ ಮನವಿ ದಿನಾಂಕ: 04-10-2023
8) ಪಾಲಿಕೆಗೆ ಅಧಿಸೂಚಿಸಲಾಗಿರುವ ವೃಂದ ಮತ್ತು ನೇಮಕಾತಿ ನಿಯಮಾವಳಿ ಆದೇಶ ಸಂಖ್ಯೆ: UDD 90 MNU 2014 (P-1), ದಿನಾಂಕ: 16-03-2020
9) ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ನಿಯೋಜನಾ ನೀತಿ ಅಧಿಸೂಚನೆ ಸಂಖ್ಯೆ: ನಅಇ 142 ಎಂ.ಎನ್.ಯು 2021, ದಿನಾಂಕ: 07-01-2022
10) ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಸೇವಾ ನಿಯಮಗಳು-1 ರವರ ಸುತ್ತೋಲೆ ಸಂಖ್ಯೆ: ಸಿಆಸುಇ 14 ಸೇನೌವ 2023, ದಿನಾಂಕ: 12-09-2023
11) ಮಾನ್ಯ ಮುಖ್ಯ ಆಯುಕ್ತರು ರವರ ಸುತ್ತೋಲೆ ಸಂಖ್ಯೆ: ಬಿ12(6)ಪಿಆರ್/56/23-24 ದಿನಾಂಕ: 05-07-2023

---

**ಪ್ರಸ್ತಾವನೆ:-**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಶ್ರೀಮತಿ ಪಿ. ಶಾನು, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಇಲಾಖೆಯಿಂದ ಎರವಲು ಸೇವೆಯ ಮೇಲೆ ಉಲ್ಲೇಖ-(1)ರ ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಅಧಿಸೂಚನೆಯಂತೆ ಪಾಲಿಕೆಗೆ ನಿಯೋಜನೆಗೊಂಡು ಸಹಾಯಕ ನಿರ್ದೇಶಕರು (ನಗರಯೋಜನೆ-ರಾಜರಾಜೇಶ್ವರಿನಗರ) ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಇವರನ್ನು ಉಲ್ಲೇಖ-(2)ರ ಮಾತೃ ಇಲಾಖೆಯಲ್ಲಿ ಕಾರ್ಯಪಾಲಕ ಅಭಿಯಂತರರ ಹುದ್ದೆಗೆ ನೇಮಿಸಲಾಗಿದ್ದರಿಂದ ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಉಲ್ಲೇಖ-(3)ರ ಅಧಿಸೂಚನೆಯಲ್ಲಿ ಜಂಟಿ ನಿರ್ದೇಶಕರು (ಉತ್ತರ), ನಗರ ಯೋಜನೆ ಕಛೇರಿಯಲ್ಲಿನ ಉಪ ನಿರ್ದೇಶಕರ ಹುದ್ದೆಗೆ ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಎರವಲು ಸೇವೆಯ ಮೇಲೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಮರು ಸ್ಥಳನಿಯುಕ್ತಿಗೊಳಿಸಿ ಆದೇಶಿಸಲಾಗಿರುತ್ತದೆ. ಅದರಂತೆ ಸದರಿಯವರನ್ನು ಪಾಲಿಕೆಯಲ್ಲಿ ಕರ್ತವ್ಯದ ಮೇಲೆ ತೆಗೆದುಕೊಂಡು ಉಲ್ಲೇಖ-(4)ರ ಆದೇಶದಂತೆ ಜಂಟಿ ನಿರ್ದೇಶಕರು (ನಗರಯೋಜನೆ-ಉತ್ತರ) ಕಛೇರಿಯ ಉಪ ನಿರ್ದೇಶಕರ ಹುದ್ದೆಯಲ್ಲಿ ಕಾರ್ಯನಿರ್ವಹಿಸಲು ನೇಮಿಸಲಾಗಿರುತ್ತದೆ.

ಸದರಿ ಅಭಿಯಂತರರು ದಿನಾಂಕ: 08-07-2021ರಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಜಂಟಿ ನಿರ್ದೇಶಕರು (ನಗರಯೋಜನೆ-ಉತ್ತರ) ಕಛೇರಿಯ ಉಪ ನಿರ್ದೇಶಕರ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಉಲ್ಲೇಖ-(2)ರ ಅಧಿಸೂಚನೆಯಂತೆ ಇವರ ನಿಯೋಜನಾ ಅವಧಿಯು ಮುಕ್ತಾಯಗೊಂಡಿರುತ್ತದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸಂಬಂಧಿಸಿದಂತೆ, ಸರ್ಕಾರದ ನಗರಾಭಿವೃದ್ಧಿ ಇಲಾಖೆಯು ಉಲ್ಲೇಖ-(9)ರಂತೆ ಅಧಿಸೂಚಿಸಿರುವ ನಿಯೋಜನಾ ನೀತಿಯಲ್ಲಿನ ಕ್ರಮ ಸಂಖ್ಯೆ: 03ರಲ್ಲಿ "ನಿಗಧಿತ ನಿಯೋಜನಾ ಅವಧಿ ಮುಗಿದ ನಂತರ, ಅಂತಹ ಅಧಿಕಾರಿ / ನೌಕರರನ್ನು ಬಿ.ಬಿ.ಎಂ.ಪಿಯ ಪ್ರಭಾರದಿಂದ ಬಿಡುಗಡೆ ಮಾಡಿ ಮಾತೃ ಇಲಾಖೆಗೆ ಹಿಂತಿರುಗಿಸತಕ್ಕದ್ದು" ಎಂದು ತಿಳಿಸಲಾಗಿರುತ್ತದೆ.

ಅದರಂತೆ, ಉಲ್ಲೇಖ-(2)ರ ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಆದೇಶದಂತೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಇಲಾಖೆಯಿಂದ ಎರವಲು ಸೇವೆಯ ಮೇಲೆ ಪಾಲಿಕೆಗೆ ನಿಯೋಜನೆಗೊಂಡು ಪ್ರಸ್ತುತ ಜಂಟಿ ನಿರ್ದೇಶಕರು (ನಗರಯೋಜನೆ-ಉತ್ತರ) ಕಛೇರಿಯಲ್ಲಿ ಉಪ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದ ಶ್ರೀಮತಿ ಪಿ. ಶಾನು, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ರವರ ನಿಯೋಜನಾ ಅವಧಿಯು ಮುಕ್ತಾಯಗೊಂಡಿರುವುದರಿಂದ, ಇವರನ್ನು ಉಲ್ಲೇಖ-(5)ರಂತೆ ದಿನಾಂಕ: 04-10-2023ರ ಅಪರಾಹ್ನದಿಂದ ಅನ್ವಯವಾಗುವಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸೇವೆಯಿಂದ ಹಾಗೂ ಹಾಲಿ ನಿರ್ವಹಿಸುತ್ತಿರುವ ಕಛೇರಿ ಕೆಲಸ ಕಾರ್ಯಗಳಿಂದ ಬಿಡುಗಡೆಗೊಳಿಸಿ ಆದೇಶಿಸಲಾಗಿರುತ್ತದೆ.

ಆದರೆ ಉಲ್ಲೇಖ-(6)ರ ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಅಧಿಸೂಚನೆಯಲ್ಲಿ ಶ್ರೀಮತಿ ಶಾನು ಪಿ, ಪ್ರಭಾರ ಕಾರ್ಯಪಾಲಕ ಅಭಿಯಂತರರು ಇವರನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿನ ಜಂಟಿ ನಿರ್ದೇಶಕರು (ನಗರಯೋಜನೆ-ಉತ್ತರ) ಕಛೇರಿಯ ಉಪ ನಿರ್ದೇಶಕರ ಹುದ್ದೆಯಲ್ಲಿ ಒಂದು ವರ್ಷದ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಮುಂದುವರೆಸಿ ಆದೇಶಿಸಲಾಗಿದ್ದು, ಅದರಂತೆ ಸದರಿ ಅಭಿಯಂತರರು ಉಲ್ಲೇಖ-(7)ರ ರೀತ್ಯಾ ಮನವಿ ಸಲ್ಲಿಸಿ ದಿನಾಂಕ: 04-10-2023ರ ಆದೇಶದಲ್ಲಿ ನನ್ನ ಸೇವೆಯನ್ನು ಮಾತೃ ಇಲಾಖೆಗೆ ಹಿಂದಿರುಗಿಸಿರುವುದನ್ನು ಹಿಂಪಡೆದು, ಸರ್ಕಾರದ ಅಧಿಸೂಚನೆಯಂತೆ ಜಂಟಿ ನಿರ್ದೇಶಕರು (ನಗರಯೋಜನೆ-ಉತ್ತರ) ಕಛೇರಿಯ ಉಪ ನಿರ್ದೇಶಕರ ಹುದ್ದೆಯಲ್ಲಿ ಮುಂದುವರೆಸಬೇಕೆಂದು ಕೋರಿರುತ್ತಾರೆ. ಆದರೆ ಸದರಿ ಅಭಿಯಂತರರನ್ನು ಪಾಲಿಕೆಯಲ್ಲಿ ಮುಂದುವರೆಸುವ ಬಗ್ಗೆ ಇವರ ಮಾತೃ ಸಂಸ್ಥೆಯಾದ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದಿಂದ ಅನುಮತಿ ಪಡೆದಿರುವುದಿಲ್ಲವೆಂದು ತಿಳಿದುಬಂದಿರುತ್ತದೆ.

ಶ್ರೀಮತಿ ಪಿ. ಶಾನು, ಪ್ರಭಾರ ಕಾರ್ಯಪಾಲಕ ಅಭಿಯಂತರರು ರವರು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಸಿವಿಲ್ ಅಭಿಯಂತರರಾಗಿದ್ದು, ಉಲ್ಲೇಖ-(8)ರಂತೆ ಪಾಲಿಕೆಗೆ ಅಧಿಸೂಚಿಸಲಾಗಿರುವ ವೃಂದ ಮತ್ತು ನೇಮಕಾತಿ ನಿಯಮಾವಳಿಗಳಲ್ಲಿ ಪಾಲಿಕೆಯ ನಗರಯೋಜನಾ ವಿಭಾಗಕ್ಕೆ ಕರ್ನಾಟಕ ಸರ್ಕಾರದ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯಿಂದ ಮಾತ್ರ ಎರವಲು ಸೇವೆಯ ಮೇಲೆ ಪಡೆಯಲು ಅವಕಾಶವಿರುತ್ತದೆ. ಅಲ್ಲದೆ ಸಿವಿಲ್ ವೃಂದಕ್ಕೆ ಲೋಕೋಪಯೋಗಿ ಬಂದರುಗಳು ಮತ್ತು ಒಳನಾಡು ಜಲಸಾರಿಗೆ ಇಲಾಖೆಯಿಂದ ಮಾತ್ರ ಎರವಲು ಸೇವೆಯ ಮೇಲೆ ಪಡೆಯಲು ಅವಕಾಶವಿರುತ್ತದೆ. ಆದರೆ ಸದರಿಯವರು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಸಿವಿಲ್ ಪ್ರಭಾರ ಕಾರ್ಯಪಾಲಕ ಅಭಿಯಂತರರಾಗಿದ್ದು ಇವರನ್ನು ಪಾಲಿಕೆಯಲ್ಲಿ ನಗರಯೋಜನೆ ಅಥವಾ ಸಿವಿಲ್ ವಿಭಾಗಕ್ಕೆ ಎರವಲು ಸೇವೆಯ ಮೇಲೆ ನಿಯೋಜಿಸಿಕೊಳ್ಳಲು ಅವಕಾಶವಿರುವುದಿಲ್ಲ.

ಹಾಗೂ ಉಲ್ಲೇಖ-(10)ರ ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಸೇವಾ ನಿಯಮಗಳು-1 ರವರ ಸುತ್ತೋಲೆಯಲ್ಲಿ ಸರ್ಕಾರಿ ನೌಕರರ ನಿಯೋಜನೆಗೆ ಸಂಬಂಧಿಸಿದಂತೆ ನೀಡಲಾಗಿರುವ ಸೂಚನೆ (ಅ)ರಲ್ಲಿ ಸ್ಪಷ್ಟವಾಗಿ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಬೇರೆ ಇಲಾಖೆಯಿಂದ ನಿಯೋಜನೆಗೆ ಅವಕಾಶ ಕಲ್ಪಿಸದೆ ಇರುವ ಹುದ್ದೆಗಳಿಗೆ ನಿಯೋಜನೆ ಮಾಡುವುದನ್ನು ನಿರ್ಬಂಧಿಸಲಾಗಿರುತ್ತದೆ ಹಾಗೂ (ಡ)ರಲ್ಲಿ ಯಾವುದೇ ಇಲಾಖೆಯಲ್ಲಾದರೂ ಕೆಳದರ್ಜೆ ಅಧಿಕಾರಿಗಳನ್ನು ಮೇಲ್ದರ್ಜೆಯ ಹುದ್ದೆಗೆ (higher rank post) ಸ್ವಂತ ವೇತನ ಶ್ರೇಣಿಯ ಆಧಾರದ ಮೇಲೆ ನೇಮಕ ಮಾಡುವುದನ್ನು / ನಿಯೋಜನೆಗೊಳಿಸುವುದನ್ನು ನಿರ್ಬಂಧಿಸಲಾಗಿದೆ.

ಶ್ರೀಮತಿ ಪಿ. ಶಾನು ರವರು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರಾಗಿದ್ದು, ಪ್ರಭಾರದ ಮೇಲೆ ಕಾರ್ಯಪಾಲಕ ಅಭಿಯಂತರರ ಹುದ್ದೆಗೆ ನೇಮಕಗೊಂಡಿರುವುದರಿಂದ ಇವರನ್ನು ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಸುತ್ತೋಲೆಯನ್ವಯ ಹಾಗೂ ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಗಳನ್ವಯ ಸ್ವಂತ ವೇತನ ಶ್ರೇಣಿಯ ಆಧಾರದ ಮೇಲೆ ಮೇಲ್ದರ್ಜೆ ಹುದ್ದೆಯಾದ ಉಪ ನಿರ್ದೇಶಕರು (ನಗರಯೋಜನೆ) ಹುದ್ದೆಗೆ ಅಥವಾ ಸಮಾನಾಂತರ ಹುದ್ದೆಯಾದ ಕಾರ್ಯಪಾಲಕ ಅಭಿಯಂತರರು (ಸಿವಿಲ್) ಹುದ್ದೆಗೆ ನೇಮಿಸಿಕೊಳ್ಳಲು ಅವಕಾಶವಿರುವುದಿಲ್ಲ.

ಆದ್ದರಿಂದ, ಶ್ರೀಮತಿ ಶಾನು ಪಿ, ಪ್ರಭಾರ ಕಾರ್ಯಪಾಲಕ ಅಭಿಯಂತರರು ಇವರು ಉಲ್ಲೇಖ-(6)ರ ಸರ್ಕಾರದ ಅಧಿಸೂಚನೆಯಂತೆ ಪಾಲಿಕೆಯಲ್ಲಿ ಮುಂದುವರೆಸಲು ಕೋರಿ ಸಲ್ಲಿಸಿರುವ ಉಲ್ಲೇಖ-(7)ರ ಮನವಿಯನ್ನು ಪರಿಗಣಿಸದೆ, ಸರ್ಕಾರದ ನಗರಾಭಿವೃದ್ಧಿ ಇಲಾಖೆಯಲ್ಲಿ ವರದಿ ಮಾಡಿಕೊಳ್ಳಲು ಹಿಂದಿರುಗಿಸುವ ಸಂಬಂಧ ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

**ಆದೇಶ**

**ಸಂಖ್ಯೆ: ಬಿ12(6)ಪಿಆರ್/148 /23-24** **ದಿನಾಂಕ:** 06.10.23

ಪ್ರಸ್ತಾವನೆಯಲ್ಲಿ ವಿವರಿಸಲಾಗಿರುವ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಶ್ರೀಮತಿ ಪಿ. ಶಾನು ರವರು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರಾಗಿದ್ದು, ಪ್ರಭಾರದ ಮೇಲೆ ಕಾರ್ಯಪಾಲಕ ಅಭಿಯಂತರರ ಹುದ್ದೆಗೆ ನೇಮಕಗೊಂಡಿರುವುದರಿಂದ ಇವರನ್ನು ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಸುತ್ತೋಲೆಯನ್ವಯ ಹಾಗೂ ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಗಳನ್ವಯ ಸ್ವಂತ ವೇತನ ಶ್ರೇಣಿಯ ಆಧಾರದ ಮೇಲೆ ಮೇಲ್ದರ್ಜೆ ಹುದ್ದೆಯಾದ ಉಪ ನಿರ್ದೇಶಕರು (ನಗರಯೋಜನೆ) ಹುದ್ದೆಗೆ ಅಥವಾ ಸಮಾನಾಂತರ ಹುದ್ದೆಯಾದ ಕಾರ್ಯಪಾಲಕ ಅಭಿಯಂತರರು (ಸಿವಿಲ್) ಹುದ್ದೆಗೆ ನೇಮಿಸಿಕೊಳ್ಳಲು ಅವಕಾಶವಿರುವುದಿಲ್ಲವಾದ್ದರಿಂದ ಸದರಿ ಅಭಿಯಂತರರು ಉಲ್ಲೇಖ-(6)ರ ಸರ್ಕಾರದ ಅಧಿಸೂಚನೆಯಂತೆ ಪಾಲಿಕೆಯಲ್ಲಿ ಮುಂದುವರೆಸಲು ಕೋರಿ ಸಲ್ಲಿಸಿರುವ ಉಲ್ಲೇಖ-(7)ರ ಮನವಿಯನ್ನು ಪರಿಗಣಿಸದೆ, ಸರ್ಕಾರದ ನಗರಾಭಿವೃದ್ಧಿ ಇಲಾಖೆಯಲ್ಲಿ ವರದಿ ಮಾಡಿಕೊಳ್ಳಲು ಹಿಂದಿರುಗಿಸಿ ಆದೇಶಿಸಿದೆ.

6/10/23

ಮಾನ್ಯ ಮುಖ್ಯ ಆಯುಕ್ತರು ರವರ ಆದೇಶದ ಮೇರೆಗೆ)

ಉಪ ಆಯುಕ್ತರು (ಆಡಳಿತ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

6/10/2023

**ಪ್ರತಿಯನ್ನು :**

: ಮಾನ್ಯ ಆಡಳಿತಗಾರರು ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
: ಮಾನ್ಯ ಮುಖ್ಯ ಆಯುಕ್ತರು ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ
: ವಿಶೇಷ ಆಯುಕ್ತರು (ಯೋಜನೆ) / ವಿಶೇಷ ಆಯುಕ್ತರು (ಆಡಳಿತ) ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
: ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು ರವರಿಗೆ ಕಳುಹಿಸಿದೆ.
: ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಶಕ್ತಿ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು-01 ರವರಿಗೆ ಕಳುಹಿಸಿದೆ.
: ಅಪರ ನಿರ್ದೇಶಕರು (ನಗರಯೋಜನೆ) ರವರಿಗೆ ಕಳುಹಿಸಿದೆ.
: ಜಂಟಿ ನಿರ್ದೇಶಕರು (ನಗರಯೋಜನೆ-ಉತ್ತರ) ರವರಿಗೆ ಕಳುಹಿಸಿದೆ.
: ನಿರ್ದೇಶಕರು, ಮಾಹಿತಿ ತಂತ್ರಜ್ಞಾನ / ಮುಖ್ಯ ಮಾಹಿತಿ ಅಧಿಕಾರಿ ರವರಿಗೆ ಕಳುಹಿಸುತ್ತಾ, ಸದರಿಯವರು ಮೊಬೈಲ್ ಫೋನ್, ಮತ್ತು ಸಿಮ್‌ಕಾರ್ಡ್ ಅನ್ನು ಪಾಲಿಕೆಗೆ ಹಿಂದಿರುಗಿಸಿರುವ ಬಗ್ಗೆ ದೃಢೀಕರಿಸಿಕೊಳ್ಳುವುದು.
: ಮು.ಲೆ.ಅ / ಮು.ಲೆ.ಪ ರವರಿಗೆ ರವರಿಗೆ /ಉ.ನಿ (ಹಣಕಾಸು-ಕೇಂದ್ರ) ರವರಿಗೆ ಕಳುಹಿಸಿದೆ.
: ಸಂಬಂಧಪಟ್ಟ ಅಭಿಯಂತರರಿಗೆ / ಕಛೇರಿ ಪ್ರತಿ.